## 35. 3 ತಿಂಗಳ ನಿರುದ್ಯೋಗ ಭತ್ಯೆ : ಕೇಂದ್ರದಿಂದ ನಿಯಮ ಸಡಿಲಿಕೆ

ಕೊರೋನಾ ಲಾಕ್‌ಡೌನ್‌ನಿಂದಾಗಿ ಉದ್ಯೋಗ ಕಳೆದುಕೊಂಡಿರುವ ಲಕ್ಷಾಂತರ ಕಾರ್ಮಿಕರಿಗೆ ನಿರುದ್ಯೋಗ ಭತ್ಯೆಯಾಗಿ ಮೂರು ತಿಂಗಳವರೆಗೆ ಶೇ.50 ರಷ್ಟು ವೇತನವನ್ನು ನೀಡುವ ನಿಯಮವನ್ನು ಕೇಂದ್ರವು ಸಡಿಲಿಸಿದೆ. ಕೊರೋನಾ ಲಾಕ್‌ಡೌನ್ ಪ್ರಭಾವದಿಂದಾಗಿ ಉದ್ಯೋಗ ಕಳೆದುಕೊಂಡ ಅಥವಾ ಉದ್ಯೋಗ ಕಳೆದುಕೊಳ್ಳುವ ಹಾದಿಯಲ್ಲಿರುವ ರಾಜ್ಯ ವಿಮಾ ನಿಗಮದ ಸದಸ್ಯರಾಗಿರುವ ಕೈಗಾರಿಕಾ ಕಾರ್ಮಿಕರಿಗೆ ಈ ಕ್ರಮವು ಒಂದು ದೊಡ್ಡ ಪರಿಹಾರವಾಗಿದೆ.

ಸಾಂಕ್ರಾಮಿಕ ರೋಗದಿಂದ ತೀವ್ರವಾಗಿ ತತ್ತರಿಸಿರುವ ಕಾರ್ಮಿಕರಿಗೆ ವೇತನ ಪರಿಹಾರ ನೀಡುವಂತೆ ಹಲವಾರು ವಿಭಾಗಗಳು ಬೇಡಿಕೆ ಇಟ್ಟಿದ್ದವು. ಕಳೆದ ಎರಡು ತಿಂಗಳ ಹಿಂದೆ ಹಣಕಾಸು ಸಚಿವಾಲಯ ಮತ್ತು ನೀತಿ ಆಯೋಗ ನಿಯಮಗಳನ್ನು ಸಡಿಲಿಸಬೇಕೆಂದು ಒತ್ತಾಯಿಸಿದ್ದವು.

ಅಟಲ್ ಬಿಮಿತ್ ವ್ಯಕ್ತಿ ಕಲ್ಯಾಣ್ ಯೋಜನಾ ಯೋಜನೆಯನ್ನು ಮಾರ್ಪಡಿಸುವ ಮೂಲಕ ಪರಿಚಯಿಸಲಾಗಿದೆ. ಇಎಸ್‌ಐಸಿ ಯೋಜನೆಯು ನಿಗದಿತ ಮಿತಿಯವರೆಗೆ ಗಳಿಸುವ ಕಾರ್ಮಿಕರನ್ನು ಒಳಗೊಳ್ಳುತ್ತದೆ ಮತ್ತು ಅವರಿಗೆ ನಿರುದ್ಯೋಗ ಭತ್ಯೆಗೆ ಅರ್ಹತೆ ನೀಡುತ್ತದೆ.

ಯೋಜನೆಯಡಿಯಲ್ಲಿ ಹಿಂದಿನ ನಾಲ್ಕು ಕೊಡುಗೆ ಅವಧಿಯಲ್ಲಿ ಗಳಿಸುವ ದಿನಕ್ಕೆ ಸರಾಸರಿ ಶೇ.25 ರಷ್ಟು ಪರಿಹಾರವನ್ನು ಕೆಲವು ಷರತ್ತುಗಳಿಗೆ ಒಳಪಟ್ಟು ಜೀವಿತಾವಧಿಯಲ್ಲಿ ಗರಿಷ್ಠ 90 ದಿನಗಳ ನಿರುದ್ಯೋಗ ಭತ್ಯೆಯನ್ನು ಪಾವತಿಸಲಾಗುತ್ತದೆ. ಇದನ್ನು ಈಗ ಶೇ.50ಕ್ಕೆ ಏರಿಸಲಾಗಿದೆ.

ಪರಿಹಾರದ ಅವಧಿಯಲ್ಲಿ ವಿಮೆ ಮಾಡಿದ ವ್ಯಕ್ತಿ ನಿರುದ್ಯೋಗಿಯಾಗಿರಬೇಕು ಅವನು/ಅವಳು ನಿರುದ್ಯೋಗಕ್ಕೆ ಮೊದಲ ಕನಿಷ್ಠ 2 ವರ್ಷಗಳವರೆಗೆ ವಿಮೆ ಮಾಡಲಾದ ಉದ್ಯೋಗದಲ್ಲಿರಬೇಕು. ಹಿಂದಿನ ನಾಲ್ಕು ಪಾವತಿ ಅವಧಿಗಳಲ್ಲಿ ವಿಮೆ ಪಾವತಿಸಿರಬೇಕು. ಈ ಹಿಂದಿನ ಷರತ್ತುಗಳು ಉದ್ಯೋಗದಾತರ ಮೂಲಕ ಸಲ್ಲಿಸಬೇಕಾಗಿತ್ತು. ಈಗ ಇಎಸ್‌ಐಸಿ ಕಛೇರಿಯನ್ನು  ಸಂಪರ್ಕಿಸಲು ಅವಕಾಶ: 90 ದಿನಗಳ ನಂತರ ಪರಿಹಾರವನ್ನು ಪಾವತಿಸುವ ಬದಲು, 30 ದಿನಗಳ ನಂತರ ಪಾವತಿಸುವ ನಿಯಮ ಇದಾಗಿದೆ.

ಮಾರ್ಚ್ 24 ರಿಂದ ಡಿಸೆಂಬರ್ 31ರವರೆಗಿನ ಅವಧಿಯಲ್ಲಿ ಮೂರು ತಿಂಗಳ (90 ದಿನಗಳು) ಭತ್ಯೆಯನ್ನು ಪಡೆಯಲು ನೌಕರರು ಅರ್ಹರಾಗಿರುತ್ತಾರೆ. ಅವರು ಏಪ್ರಿಲ್ 1, 2018ರಿಂದ ಎರಡು ವರ್ಷಗಳ ಕಾಲ ಇಎಸ್‌ಐ ಯೋಜನೆಯ ಭಾಗವಾಗಿರಬೇಕು. 2019ರ ಅಕ್ಟೋಬರ್ 1 ರಿಂದ 2020ರ ಮಾರ್ಚ್ 31ರ ಅವಧಿಯಲ್ಲಿ ಕನಿಷ್ಠ 78 ದಿನಗಳವರೆಗೆ ಮತ್ತು 2018ರ ಏಪ್ರಿಲ್ 1 ರಿಂದ ಇತರ ಮೂರು ಆರು ಮಾಸಿಕ ಕೊಡುಗೆ ಅವಧಿಗಳಲ್ಲಿ ಒಂದಾಗಿರಬೇಕು ಎಂದು ಹೇಳಿದೆ.

2021ರ ಜೂನ್ 30ರವರೆಗೆ ಈ ಯೋಜನೆಯನ್ನು ಇನ್ನೂ ಒಂದು ವರ್ಷ ವಿಸ್ತರಿಸಲು ಇಎಸ್‌ಐಸಿ ನಿರ್ಧರಿಸಿದೆ. ಕಾರ್ಮಿಕ ಸಚಿವ ಸಂತೋಷ್ ಗಂಗ್ವಾರ್ ನೇತೃತ್ವದ ಇಎಸ್‌ಐಸಿ ಸಭೆಯಲ್ಲಿ ಈ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಎಎಸ್‌ಐಸಿ ಆಸ್ಪತ್ರೆಗಳಲ್ಲಿ ಒಟ್ಟು ಶೇ.10 ರಷ್ಟು ಹಾಸಿಗೆಗಳಲ್ಲಿ ಐಸಿಯು ಮತ್ತು ಎಚ್‌ಡಿಯು ಸೇವೆಗಳನ್ನು ಸ್ಥಾಪಿಸಲು ಸಭೆ ನಿರ್ಧರಿಸಿದೆ ಎಂದು ಸರ್ಕಾರದ ಹೇಳಿಕೆ ತಿಳಿಸಿದೆ.

ಆಧಾರ:ವಿಶ್ವವಾಣಿ, ದಿನಾಂಕ:22.08.2020